**ಕರ್ನಾಟಕ ಸರ್ಕಾರ**

ಸಂಖ್ಯೆ :ಇಪಿ 26 ಇಟಿಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 12-11-2020

**ಇಂದ :**

**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,
ಬೆಂಗಳೂರು.

**ಇವರಿಗೆ:**

**ಆಯುಕ್ತರು,**
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಮಾನ್ಯರೆ,**

**ವಿಷಯ:** 2020-21ನೇ ಸಾಲಿನ ವರ್ಗಾವಣೆ ಪ್ರಕ್ರಿಯೆ ಬಗ್ಗೆ.

**ಉಲ್ಲೇಖ:** ತಮ್ಮ ಪತ್ರ ಸಂಖ್ಯೆ:ವರ್ಗಾವಣಾ ಕೋಶ/01/2020-21 ದಿನಾಂಕ:15-10-2020, ಮತ್ತು 28-10-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳನ್ನು ಪರಿಶೀಲಿಸಲಾಗಿ, ಇದು ಅಸಾಧಾರಣ ಪರಿಸ್ಥಿತಿಯ ವರ್ಷವಾಗಿರುವ ಹಿನ್ನೆಲೆಯಲ್ಲಿ, ವಿಶೇಷ ಪ್ರಕರಣವೆಂದು ಕೆಳಕಂಡಂತೆ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

1) ಪ್ರಸಕ್ತ ಸಾಲಿಗೆ ಹೆಚ್ಚುವರಿ ಶಿಕ್ಷಕರ ಮರುಹಂಚಿಕೆ ಹಾಗೂ ವಲಯ ವರ್ಗಾವಣೆ ಪ್ರಕ್ರಿಯೆಗಳಿಗೆ ವಿನಾಯ್ತಿ ನೀಡಿ ಕೋರಿಕೆ, ಪರಸ್ಪರ ವರ್ಗಾವಣೆಗಳನ್ನು ನೆರವೇರಿಸುವುದು.
2) 2019-20ನೇ ಸಾಲಿನಲ್ಲಿ ಕಡ್ಡಾಯ ಹಾಗೂ ಹೆಚ್ಚುವರಿ ವರ್ಗಾವಣೆಗೆ ಒಳಗಾಗಿದ್ದ ಶಿಕ್ಷಕರಿಗೆ ಆದ ಅನಾನುಕೂಲವನ್ನು ಸರಿಪಡಿಸಲು ಈ ಶಿಕ್ಷಕರಿಗೆ ಮೊದಲ ಆದ್ಯತೆಯನ್ನು ಕೌನ್ಸೆಲಿಂಗ್‌ನಲ್ಲಿ ಕಲ್ಪಿಸುವುದು. ಕಡ್ಡಾಯ ಹಾಗೂ ಹೆಚ್ಚುವರಿ ಶಿಕ್ಷಕರ ವರ್ಗಾವಣೆಯನ್ನು ಕೈಗೊಳ್ಳುವಾಗ ಈ ಎರಡೂ ವರ್ಗಗಳ ಪೈಕಿ ಕಡಿಮೆ ಸಂಖ್ಯೆಯಿರುವ ವರ್ಗದ ಶಿಕ್ಷಕರ ವರ್ಗಾವಣೆಯನ್ನು ಮೊದಲು ಕೈಗೊಳ್ಳುವುದು.
3) ಪದೋನ್ನತಿಗಳ ಮೂಲಕ ಶೇ:25ರ ಖಾಲಿ ಹುದ್ದೆಯ ತಾಲ್ಲೂಕುಗಳು ಹೆಚ್ಚಾಗಿರುವ ಕಾರಣ, ಅಧಿಸೂಚನೆಯ ದಿನಾಂಕಕ್ಕೆ ಯಾವುದೇ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ

ಸಂಖ್ಯೆಯ ಆಧಾರದಲ್ಲಿ ಶೇಕಡವಾರು ಮಿತಿಯನ್ನು ಲೆಕ್ಕಾಚಾರ ಮಾಡುವುದು. ಈ ಬಾರಿ ಮಂಜೂರಾದ ಹುದ್ದೆಗಳ ಆಧಾರದಲ್ಲಿ ಶೇ.25 ರ ಲೆಕ್ಕಾಚಾರ ಬೇಡ.

4) ವರ್ಗಾವಣೆ ಘಟಕಕ್ಕೆ ನಿರ್ದೇಶಕರು (ಉರ್ದು ಮತ್ತು ಅಲ್ಪಸಂಖ್ಯಾತ) ಇವರನ್ನು ಮುಖ್ಯಸ್ಥರಾಗಿ ನೇಮಿಸುವ ಪ್ರಸ್ತಾವನೆಯನ್ನು ಒಪ್ಪಲಾಗಿದೆ.

ಈಗಾಗಲೇ ಸೂಚಿಸಲಾಗಿರುವಂತೆ ಕೂಡಲೇ ವೇಳಾಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸುವುದು.

**(ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)**

ತಮ್ಮ ನಂಬುಗೆಯ,

12/11/2020

**(ಶೇಖರ)**

ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)

(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ